# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.30 ಕಾಡುಗೊಂಡನಹಳ್ಳಿಗೆ ಸಂಬಂಧಿಸಿದಂತೆ ದಿನಾಂಕ: 21-05-2022 ರಂದು ಶ್ರೀ.ವೆಂಕಟ ದುರ್ಗಾ ಪ್ರಸಾದ್ ಕುಂಚಾಲ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಮತ್ತು ವಿಪತ್ತು ನಿರ್ವಹಣಾ ಸಮಿತಿ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ವೆಂಕಟ ದುರ್ಗಾ ಪ್ರಸಾದ್ ಕುಂಚಾಲ, | ಜಂಟಿ ನಿರ್ದೇಶಕರು (ನಗರಯೋಜನೆ-ಸ್ಕ್ವಾಡ್) ಹಾಗೂ ನೋಡಲ್‌ಅಧಿಕಾರಿ& ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ-30 ಕೆ.ಜಿ.ಹಳ್ಳಿ |
| 2 | ಶ್ರೀ.ಹರ್ಷಿತ್ ಕುಮಾರ್ | ಸಹಾಯಕ ಅಭಿಯಂತರರು, & ಸದಸ್ಯ ಕಾರ್ಯದರ್ಶಿಗಳು ವಾರ್ಡ್ ಸಮಿತಿ ವಾರ್ಡ್ ಸಂಖ್ಯೆ.30. ಕೆ.ಜಿ.ಹಳ್ಳಿ. |
| 3 | ಶ್ರೀ.ಲೋಕೇಶ್.ಹೆಚ್ | ವೈಧ್ಯಾಧಿಕಾರಿಗಳು ,ಕೆ.ಜಿ.ಹಳ್ಳಿ PHC |
| 4 | ಶ್ರೀ.ಮಂಜುನಾಥ್ | ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 5 | ಕುಮಾರಿ ಮೋನಿಕಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 6 | ಶ್ರೀ.ಮೊಹಮ್ಮದ್ ಮಜಹುದ್ದೀನ್ | ಹೆಚ್.ಆರ್.ಪಿ.ಜಿ |
| 7 | ಶ್ರೀ.ಬೋಗೇಶ್ | ಮಾರ್ಷಲ್ |
| 8 | ಶ್ರೀ.ಪಿ.ಚಂದ್ರಶೇಖರ್.ಜಿ.ಎಸ್ | HRPG |
| 9 | ಶ್ರೀ.ಫಹೀಮ್ ಖಾನ್ | ಅಲ್ಪಸಂಖ್ಯಾತರ ಅಧ್ಯಕ್ಷರು |
| 10 | ಶ್ರೀ.ಎರ್ರನ್ ಕುಮಾರ್ | ಸಾರ್ವಜನಿಕರು |
| 11 | ಶ್ರೀ.ಯಾಕೂಬ್ ಖಾನ್ | ಸ್ಥಳೀಯರು |
| 12 | ಶ್ರೀ.ಜಾನ್ ಫ್ರಾನ್ಸಿಸ್ | ಸ್ಥಳೀಯರು |
| 13 | ಶ್ರೀ.ಮೊಹಮ್ಮದ್ ಇಲಿಯಾಸ್ | ಸ್ಥಳೀಯರು |

| | | |
|---|---|---|
| 14 | ಶ್ರೀ.ಸೈಯದ್ ಅಹಮ್ಮದ್ | ಸ್ಥಳೀಯರು |
| 15 | ಶ್ರೀ.ಸೈಯದ್ ಜಮೀಲ್ | ಸ್ಥಳೀಯರು |
| 16 | ಶ್ರೀ.ಕೆ.ರಮೇಶ್ | ಸ್ಥಳೀಯರು |
| 17 | ಶ್ರೀ.ಎಷಾನ್ | ಸ್ಥಳೀಯರು |
| 18 | ಶ್ರೀ.ಪ್ರತಾಪ್ | ಸ್ಥಳೀಯರು |
| 19 | ಶ್ರೀ.ಜೈದೇವ್ ಪ್ರಕಾಶ್ | ಸ್ಥಳೀಯರು |
| 20 | ಶ್ರೀ.ಕೆ.ಸುರೇಶ್ | ಸ್ಥಳೀಯರು |
| 21 | ಶ್ರೀ.ಜೆ.ಮಹೇಂದ್ರನ್ | ಸ್ಥಳೀಯರು |
| 22 | ಶ್ರೀ.ದೇವೆಂದ್ರನ್ | ಸ್ಥಳೀಯರು |
| 23 | ಶ್ರೀ.ರಾಜರಾಮ್ | ಸ್ಥಳೀಯರು |
| 24 | ಶ್ರೀ.ಮುನೀರ್ ಅಹಮ್ಮದ್ | ಸ್ಥಳೀಯರು |

ನೋಡಲ್ ಅಧಿಕಾರಿರವರು ಸಭೆಯಲ್ಲಿ ಕಳೆದ ಎರಡು ತಿಂಗಳಿನಿಂದ ವಾರ್ಡ್‌ನಲ್ಲಿ ಸಹಾಯಕ ಅಭಿಯಂತರರು ಇಲ್ಲದಿರುವ ವಿಷಯವನ್ನು ತಿಳಿಸಿದರು. ಹಾಗೂ ಹೊಸದಾಗಿ ನೇಮಕಗೊಂಡಿರುವ ಶ್ರೀ.ಹರ್ಷಿತ್ ಕುಮಾರ್.ಎಲ್.ಎಸ್ ಸಹಾಯಕ ಅಭಿಯಂತರರನ್ನು ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಪರಿಚಯಿಸಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1) **ಘನತ್ಯಾಜ್ಯ ನಿರ್ವಹಣೆ:**-ವಾರ್ಡ್ ವ್ಯಾಪ್ತಿಯ ವಿನೋಭನಗರ ಪ್ರದೇಶದಲ್ಲಿ ಆಟೋ ಚಾಲಕರು ಸಮಯಕ್ಕೆ ಸರಿಯಾಗಿ ಘನತ್ಯಾಜ್ಯ ನಿರ್ವಹಣೆ ನಿರ್ವಹಿಸುತ್ತಿಲ್ಲವೆಂದು ಮತ್ತು ಮನೆ ಮನೆ ಹೋಗಿ ಕಸ ಸಂಗ್ರಹಿಸುತ್ತಿಲ್ಲವೆಂದು ಶ್ರೀ.ಪ್ರತಾಪ್ ರವರು ತಿಳಿಸಿರುತ್ತಾರೆ ಹಾಗೂ ಪೌರಕಾರ್ಮಿಕರು ಘನತ್ಯಾಜ್ಯ ನಿರ್ವಹಣೆ ಸಂಧರ್ಭದಲ್ಲಿ ಕೈಗಳಿಗೆ ಗ್ಲೌಸ್‌ಗಳನ್ನು ಬಳಸುತ್ತಿಲ್ಲ ಮತ್ತು ಘನತ್ಯಾಜ್ಯ ಗುತ್ತಿಗೆದಾರರು ಕೆಲವು ತಿಂಗಳುಗಳಿಂದ ಬ್ಲೀಚಿಂಗ್ ಪೌಡರ್ ಸಿಂಪಡಿಸುತ್ತಿಲ್ಲವೆಂದು ತಿಳಿಸಿದರು.

ಸದರಿ ವಿಷಯದ ಬಗ್ಗೆ ಕುಮಾರಿ ಮೋನಿಕಾ. ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

**(ಕ್ರಮ :-ಸ.ಕಾ.ಅ ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ಬೆಂಗಳೂರು)**

2) **ಬೀದಿ ದೀಪಗಳ ನಿರ್ವಹಣೆ ಬಗ್ಗೆ:**-ವಾರ್ಡ್ ವ್ಯಾಪ್ತಿಯಲ್ಲಿನ, ಪಿಳ್ಳಣ್ಣಗಾರ್ಡನ್ 6ನೇ ಮುಖ್ಯರಸ್ತೆ, 2ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆಯಲ್ಲಿ ಬೀದಿ ದೀಪಗಳನ್ನು ದುರಸ್ಥಿಪಡಿಸಲು ಶ್ರೀ.ಚಂದ್ರಶೇಖರ್.ಜಿ.ಎಸ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

**(ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ವಿಭಾಗ ಬಿ.ಬಿ.ಎಂ.ಪಿ)**

3) <u>ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):-</u>ಕೆ.ಜಿ.ಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿನ ನೀರು ಸರಬರಾಜು ಮಾಡುವ ವೇಳಾಪಟ್ಟಿಯನ್ನು ನೀಡಲು ಶ್ರೀ.ಫಹೀಮ್‌ಖಾನ್ ರವರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ.ಮಂಜುನಾಥ್, ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ನೀರು ಸರಬರಾಜು ಮಾಡುವ ವೇಳಾ ಪಟ್ಟಿಯನ್ನು ತಿಳಿಸಿರುತ್ತಾರೆ ಹಾಗೂ ಅದರ ಪ್ರತಿಯನ್ನು ನೀಡಿರುತ್ತಾರೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿನ ಪಿಳ್ಳಣ್ಣಗಾರ್ಡನ್‌ಗೆ ಸಮಯಕ್ಕೆ ಸರಿಯಾಗಿ ನೀರಿನ ಟ್ಯಾಂಕರ್‌ಗಳು ಬರುತ್ತಿಲ್ಲವೆಂದು ಶ್ರೀ.ಯಾಕೂಬ್‌ಖಾನ್ ರವರು ತಿಳಿಸಿದರು ಮತ್ತು ಪಿಳ್ಳಣ್ಣಗಾರ್ಡ್ನ್‌ನಲ್ಲಿ ಚರಂಡಿಯಲ್ಲಿನ ಹೂಳನ್ನು ತೆಗೆಯಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಿಬ್ಬಂದಿಯವರು ಚರಂಡಿಯನ್ನು ಸ್ವಚ್ಛಗೊಳಿಸಲು ಸ್ಥಳೀಯರಲ್ಲಿ ಹಣವನ್ನು ಕೇಳುತ್ತಿರುವುದಾಗಿ ತಿಳಿಸಿದರು.

ಈ ಬಗ್ಗೆ ಸ್ಥಳ ಪರಿಶೀಲಿಸಿ ಸಂಬಂಧಪಟ್ಟವರನ್ನು ವಿಚಾರಿಸಿ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ.ಮಂಜುನಾಥ್. ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ತಿಳಿಸಿರುತ್ತಾರೆ ಹಾಗೂ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಂಡು ಮುಂದಿನ ಸಭೆಯಲ್ಲಿ ಮಾಹಿತಿ ಸಲ್ಲಿಸಬೇಕೆಂದು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ :- ಸ.ಕಾ.ಅ.ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪ-ವಿಭಾಗ, ಫ್ರೆಜರ್‌ಟೌನ್)</u>

4) <u>ಆರೋಗ್ಯ ವೈಧ್ಯಾಧಿಕಾರಿಗಳು</u>:- ವಾರ್ಡ್ ವ್ಯಾಪ್ತಿಯಲ್ಲಿ 12 ರಿಂದ 18 ವರ್ಷದ ಒಳಗಿರುವ ಎಲ್ಲಾ ಮಕ್ಕಳಿಗೆ ಕೋವಿಡ್-19 ಕೋ-ವಾಕ್ಸೀನ್ ಲಸಿಕೆಯನ್ನು ನೀಡುತ್ತಿರುವುದಾಗಿ ಡಾ॥ಲೋಕೇಶ್.ಹೆಚ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್ ಲಸಿಕೆ ನೀಡುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸಾರ್ವಜನಿಕರಲ್ಲಿ ಕೋರಿರುತ್ತಾರೆ.

<u>(ಕ್ರಮ:- ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ)</u>

5) <u>ಕಾಮಗಾರಿ ಇಲಾಖೆ</u>:- ವಾರ್ಡ್ ವ್ಯಾಪ್ತಿಯಲ್ಲಿನ ವಿನೋಭನಗರ ಹಾಗೂ ಬಿ.ಎಂ.ಲೇಔಟ್‌ನಲ್ಲಿ ರಸ್ತೆಗುಂಡಿಗಳು ಹಾಗೂ ಅನಧಿಕೃತ ರಸ್ತೆ ಅಗೆತ ಇರುವುದಾಗಿ ಕಂಡುಬಂದಿದ್ದು, ಇದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಹೆಚ್ಚಿನ ಅಪಘಾತಗಳು ಆಗುವ ಸಂಭವವಿರುತ್ತದೆ. ಆದ್ದರಿಂದ ಕೂಡಲೇ ರಸ್ತೆಯಲ್ಲಿರುವ ಎಲ್ಲಾ ರಸ್ತೆ ಗುಂಡಿಗಳನ್ನು ಮುಚ್ಚಬೇಕೆಂದು ಶ್ರೀ.ಪಿ.ಚಂದ್ರಶೇಖರ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರಿಗೆ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ನೋಡಲ್ ಅಧಿಕಾರಿರವರು ತಿಳಿಸಿರುತ್ತಾರೆ.

<u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ- ವಿಭಾಗ ಬಿ.ಬಿ.ಎಂ.ಪಿ)</u>

6) <u>ಬೆಸ್ಕಾಂ ವಿಭಾಗ:-</u> ವಾರ್ಡ್ ವ್ಯಾಪ್ತಿಯ ಹಿಂದೂ ರುದ್ರಭೂಮಿ ಹಿಂಭಾಗದಲ್ಲಿ ಅಳವಡಿಸಲಾಗಿರುವ ಟ್ರಾನ್ಸ್‌ಫಾರ್ಮರ್‌ಗಳು ದುಸ್ಥಿತಿಯಲ್ಲಿದ್ದು ಪದೇ ಪದೇ ಹಾಳಾಗುತ್ತಿದ್ದು, ಅವುಗಳನ್ನು ಬದಲಾಯಿಸಬೇಕೆಂದು ಶ್ರೀ.ಎರ್ರನ್ ಕುಮಾರ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ. ಹಾಗೂ ಪಿಳ್ಳಣ್ಣಗಾರ್ಡನ್‌ನ 5ನೇ ಮುಖ್ಯರಸ್ತೆಯಲ್ಲಿ ಎಲೆಕ್ಟ್ರಿಕ್ ಪೋಲ್‌ಗಳ ಕಾಂಕ್ರೀಟ್ ಒಡೆದು ತಂತಿಗಳು ಹೊರಗೆ ಬಂದು, ತುಕ್ಕು ಹಿಡಿದು ಹಾಳಾಗುತ್ತಿರುವ ಕಾರಣ ಅದನ್ನು ದುರಸ್ಥಿ ಪಡಿಸಬೇಕೆಂದು ಶ್ರೀ.ಪ್ರತಾಪ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಸೋಡಿಯಂ ದೀಪಗಳನ್ನು ಎಲ್.ಇ.ಡಿ ದೀಪಗಳೊಂದಿಗೆ ಬದಲಾಯಿಸುವಂತೆ ಕೋರಿರುತ್ತಾರೆ.

ಅದರಂತೆ ಸದರಿ ವಿಷಯದ ಬಗ್ಗೆ ಸ್ಥಳ ಪರಿಶೀಲಿಸಿ ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲು ಬೆಸ್ಕಾಂ ವಿಭಾಗದವರಿಗೆ ತಿಳಿಸುವಂತೆ ಸಹಾಯಕ ಅಭಿಯಂತರರಿಗೆ ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ವಿಭಾಗ ಬಿ.ಬಿ.ಎಂ.ಪಿ)

7) ಅರಣ್ಯ ಇಲಾಖೆ:- ವಾರ್ಡ್ ವ್ಯಾಪ್ತಿಯ ಪಿಳ್ಳಣ್ಣಗಾರ್ಡನ್ 5ನೇ ಮುಖ್ಯರಸ್ತೆ, ದೇವರಾಜ್ ಅರಸ್ ರಸ್ತೆ, ಟೆಲಿಗ್ರಾಫ್ ಸ್ಟ್ರೀಟ್‌ನಲ್ಲಿ 2 ಮರಗಳು ಬೀಳುವ ಸ್ಥಿತಿಯಲ್ಲಿದ್ದು, ಮರಗಳನ್ನು ತೆರವುಗೊಳಿಸಲು ಹಾಗೂ ಪಿಳ್ಳಣ್ಣಗಾರ್ಡನ್ ಪ್ರದೇಶದ ಹಲವು ರಸ್ತೆಗಳಲ್ಲಿ ಮರಗಳ ಕೊಂಬೆಗಳನ್ನು ಕತ್ತರಿಸಲು ಶ್ರೀ.ಎರ್ರನ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಈ ಹಿಂದೆ ಹಲವಾರು ಬಾರಿ ಸಭೆಯಲ್ಲಿ ಸೂಚಿಸಿದರು ಸಹ ಕ್ರಮ ಕೈಗೊಂಡಿಲ್ಲವೆಂದು ಶ್ರೀ.ಎರ್ರನ್ ರವರು ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಅರಣ್ಯ ಇಲಾಖೆ ರವರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

(ಕ್ರಮ:- ವಲಯ ಅರಣ್ಯಾಧಿಕಾರಿಗಳು ಪೂರ್ವ ಬಿ.ಬಿ.ಎಂ.ಪಿ

9) ಕಾನೂನು ಸುವ್ಯವಸ್ಥೆ (ಪೊಲೀಸ್ ಇಲಾಖೆ)- ವಾರ್ಡ್ ವ್ಯಾಪ್ತಿಯ ಪಿಳ್ಳಣ್ಣಗಾರ್ಡನ್‌ನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಅಂಬೇಡ್ಕರ್ ಉದ್ಯಾನವನ ನಿರ್ಮಾಣವಾಗಿದ್ದು, ಸಾರ್ವಜನಿಕರ ಪ್ರವೇಶಕ್ಕೆ ಅನುಮತಿಯನ್ನು ನೀಡಿಲ್ಲವೆಂದು ಮತ್ತು ಅತೀ ಶೀಘ್ರವಾಗಿ ಉದ್ಯಾನವನವನ್ನು ಉದ್ಘಾಟಿಸಿ ಸಾರ್ವಜನಿಕರ ಪ್ರವೇಶಕ್ಕೆ ಅನುಮತಿ ನೀಡಬೇಕೆಂದು ಶ್ರೀ.ರಾಜರಾಮ್ ರವರು ಸಭೆಯಲ್ಲಿ ತಿಳಿಸಿದರು. ಸದರಿ ಉದ್ಯಾನವನದ ಸುತ್ತಮುತ್ತ ಕೆಲವು ಕಿಡಿಗೇಡಿಗಳು ಕಾನೂನು ಬಾಹಿರ ಚಟುವಟಿಕೆಗಳು ನಡೆಸುತ್ತಿರುವುದು ಸಾರ್ವಜನಿಕರು ತಿಳಿಸಿರುತ್ತಾರೆ. ಈ ಬಗ್ಗೆ ನಿಯಮಿತವಾಗಿ ಹೊಯ್ಸಳ ವಾಹನವನ್ನು ಪ್ಯಾಟ್ರೋಲಿಂಗ್ ಮಾಡುವಂತೆ ಸೂಕ್ತ ಕ್ರಮವಹಿಸಿ ಹಾಗೂ ಅದರ ಬಗ್ಗೆ ಮುಂದಿನ ಸಭೆಯಲ್ಲಿ ಮಾಹಿತಿ ನೀಡಬೇಕೆಂದು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ: ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೊಲೀಸ್ ಠಾಣೆ)

ಮುಂದುವರೆದು ದಿನಾಂಕ: 21.05.2022 ರಂದು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವ ಪೊಲೀಸ್ ಇಲಾಖೆ, ಬೆಸ್ಕಾಂ ಇಲಾಖೆ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹಾಗೂ ಯಾವುದೇ ವಾರ್ಡ್ ಸಮಿತಿ ಸಭೆಗೆ ಹಾಜರಾಗಿರದ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ಅಧಿಕಾರಿಗಳು ತಪ್ಪದೇ ಹಾಜರಾಗಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಮೇಲಾಧಿಕಾರಿಗಳಿಗೆ ವರದಿ ಮಾಡಲು ವಾರ್ಡ್‌ನ ನೋಡಲ್ ಅಧಿಕಾರಿ ರವರಿಗೆ ಸೂಚಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

25/05/22

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

ಜಂಟಿ ನಿರ್ದೇಶಕರು (ನಗರ ಯೋಜನೆ- ಸ್ಕ್ವಾಡ್)
ಹಾಗೂ ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

ಪ್ರತಿಯನ್ನು:

1. ಮಾನ್ಯ ಶಾಸಕರು, ಸರ್ವಜ್ಞನಗರ ವಿಧಾನ ಸಭಾಕ್ಷೇತ್ರ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ ಕಳುಹಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ-ವಿಭಾಗ ಪಿಳ್ಳಣ್ಣಗಾರ್ಡನ್ ಕೆ.ಜಿ.ಹಳ್ಳಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

9. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ- ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಫ್ರೆಜರ್‌ಟೌನ್ ಉಪ-ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಉಪ-ಅರಣ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಆರಕ್ಷಕ ವೃತ್ತ ನಿರೀಕ್ಷಕರು (ಕಾನೂನು ಮತ್ತು ಸುವ್ಯವಸ್ಥೆ) ಕೆ.ಜಿ.ಹಳ್ಳಿ ಪೊಲೀಸ್‌ಠಾಣೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
14. ಕಛೇರಿ ಕಡತಕ್ಕೆ.